ಎಂದು ಮೂರು ಬಾರಿ ಮಂತ್ರ ಹೇಳಿಕೊಂಡಂತೆ ಹೇಳಿಕೊಂಡು ಹೊರಟ.

ರಸ್ತೆ ಆಗಲೇ ಜನ, ವಾಹನಗಳ ಓಡಾಟದಿಂದ ನಲುಗತೊಡಗಿತ್ತು. ಹಾರ್ನು-ಬೈಗುಳಗಳ ಜುಗಲ್ಬಂದಿ, ಬೀದಿ ಅಂಗಡಿಗಳ ಮಾಲೀಕರು-ಗಿರಾಕಿಗಳ ಚೌಕಾಸಿಗಳ ಗದ್ದಲದಲ್ಲಿ ತಾವು ಸದ್ದು ಮಾಡಿದರೆ ಕೇಳುವವರಿಲ್ಲ ಎಂದು ಬೀದಿನಾಯಿಗಳೂ ಬೇಸರದಿಂದ ಸುಮ್ಮನಾಗುವಷ್ಟು ಗದ್ದಲ. ನಿಂತ ಗಾಡಿಗಳ ಬದಿಗನ್ನಡಿಗಳಲ್ಲಿ, ರಸ್ತೆಬದಿಯ ಅಂಗಡಿಗಳ ಗಾಜಿನಲ್ಲಿ ತನ್ನ ಮುಖ ಕಾಣಿಸುತ್ತದೋ ಎನ್ನುವ ಕುತೂಹಲದಲ್ಲಿ ಇಣುಕಿ, ತಾನು ಕಾಣಿಸದೇ ಹೋದಾಗ ಲಾಟರಿ ಟಿಕೇಟು ಒಂದೇ ಸಂಖ್ಯೆಯಿಂದ ಮತ್ತೆ ತಪ್ಪಿಹೋಯಿತು ಅನ್ನುವ ಹಾಗೆ 'ಥತ್ತೇರಿಕಿ' ಎಂದುಕೊಳ್ಳುತ್ತ ಜನಸಾಗರದ ನಡುವೆ ನುಸುಳಿಕೊಂಡು ಮುನ್ನುಗ್ಗತೊಡಗಿದ. ಆ ರಸ್ತೆಯೂ ಮನೆಯ ವರಾಂಡದ, ಆಫೀಸಿನ ಮೀಟಿಂಗ್ ರೂಮಿನ ವಿಸ್ತೃತ ಭಾಗವೋ ಎನ್ನುವಂತೆ ತೀರಾ ಖಾಸಗಿಯ, ಕೆಲಸದ ಸಂಬಂಧದ ಗುಟ್ಟಿನ ಮಾತುಕತೆಗಳನ್ನು ಬಿಡುಬೀಸಾಗಿ ಮಾಡುತ್ತ, ಸ್ಮಾರ್ಟ್ ಪೋನಿನಲ್ಲಿ ಬಂದ ಮಿಮೆ, ಜೋಕುಗಳಿಗೆ ನಗುತ್ತ ಹೋಗುತ್ತಿದ್ದವರನ್ನು ಕಂಡು, ತನ್ನ ಮಾಮೂಲಿನ ದಿನಗಳಲ್ಲಿಯೂ ತಾನು ಅವರ ಕಣ್ಣಿಗೆ ಬೀಳುತ್ತಿರಲಿಲ್ಲ ಎಂದನಿಸಿತು.

ಹಾದಿಯಲ್ಲಿ ಟೋಪಿ, ಬಣ್ಣದ ಕನ್ನಡಕ, ಕೈಚೀಲ ಮಾರಲು ನಿಂತ ಅಂಗಡಿಯವನನ್ನು 'ಈಗ ಗಂಟೆ ಎಷ್ಟಾಯ್ತು?' ಎಂದು ಕೇಳಿದರೆ, ಅವನು ಉತ್ತರ ಕೊಡುವುದಿರಲಿ ತನ್ನ ಕಡೆಗೆ ತಿರುಗಿಯೂ ನೋಡದಿದ್ದಾಗ ತಾನು ಬರೇ ಕನ್ನಡಿಯಲ್ಲಷ್ಟೆ ಅಲ್ಲ, ಬೇರೆಯವರ ಕಣ್ಣಿಗೂ ಬೀಳುವುದಿಲ್ಲವೇನೋ ಎನ್ನುವುದು ಮತ್ತೆ ಹೆದರಿಸಿದಂತಾಗಿ, 'ಇದೊಳ್ಳೆ ರಗಳೆ ಅಂಟಿಕೊಂಡಿತಲ್ಲ' ಎನ್ನುವ ಬೇಸರದೊಟ್ಟಿಗೆ ಎಲ್ಲದರ ಮೇಲೆಯೂ ಸಿಟ್ಟು ಬಂದು, ಸುಮ್ಮನೆ ನಿಂತಿದ್ದ ಬೀದಿ ನಾಯಿಗಳನ್ನೊಮ್ಮೆ ಕೆಕ್ಕರಿಸಿ ನೋಡಿದ. ಅವು ಹೆದರಿ ಬಾಲ ಮುದುರಿಕೊಂಡುದನ್ನು ಕಂಡಾಗ ಸ್ವಲ್ಪ ತೃಪ್ತಿಯಾಯಿತು. ಉಳಿದ ದಿನಗಳಲ್ಲಿ ಅವುಗಳ ಹಲ್ಲಿನ ಚೂಪಿಗೆ ಹೆದರುತ್ತಿದ್ದ, ಅವುಗಳ ಸ್ವಾತಂತ್ರ್ಯ ಕಂಡು ಕರುಬುತ್ತಿದ್ದ ಅವನಿಗೆ ತನ್ನ ಇರುವಿಕೆಯ ಬಗ್ಗೆ ಸಮಾಧಾನವಾಯಿತು. 'ಸದ್ಯಕ್ಕೆ ಈ ನಾಯಿಗಳ ಕಣ್ಣಿಗಾದರೂ ನಾನು ಬಿದ್ದೆನಲ್ಲ' ಎಂದು ತೃಪ್ತಿಪಟ್ಟುಕೊಂಡು ಕಾಡುತ್ತಿದ್ದ ವಿಚಾರಗಳನ್ನು ಬದಿಗೊತ್ತಿ ಬೆಳಗ್ಗಿನ ಕಾಫಿ ಕುಡಿಯಲೆಂದು ನಂದನವನ ಹೋಟೆಲಿಗೆ ಧಾವಿಸಿದ.

* * *

ಸಿಟಿಗೆ ಬಂದು ಆತ್ಮಾರಾಮ ಆಗಲೇ ಎಂಟು ವರ್ಷಗಳು, ದುಡಿದ ಹಣದಂತೆಯೇ ಲೆಕ್ಕಕ್ಕೆ ಬಾರದ ಹಾಗೆ ಕರಗಿಹೋಗಿದ್ದವು. ಅವನ ಅಪಾರ್ಟ್‌ಮೆಂಟಿನಿಂದ ಆಫೀಸಿನ ದಾರಿಯಲ್ಲಿದ್ದ ಈ ನಂದನವನ ಹೋಟೆಲು ಅವನ ಪಾಲಿಗೆ ನಂದನದ ಒಂದು ತುಣುಕೇ ಆಗಿತ್ತು. ಅಲ್ಲಿ ಅವನು ಕಾಲು ಚಾಚಿ ಕುಳಿತುಕೊಳ್ಳಬಹುದಿತ್ತು, ಕೌಂಟರಿನಲ್ಲಿದ್ದ ಪತ್ರಿಕೆಯನ್ನು ತೆರೆದು ಓದುತ್ತ ಸಮಯ ಕಳೆಯಬಹುದಿತ್ತು, ಬಂದು ಹೋಗುವವರನ್ನೆಲ್ಲ 'ಬನ್ನಿ', 'ಸಂತೋಷ', 'ಮತ್ತೆ ಬನ್ನಿ' ಮುಂತಾದ ಇಮೋಜಿಗಳನ್ನು ಕಣ್ಣಲ್ಲೇ ಅರಳಿಸಿ ಅತಿಥಿ ಸತ್ಕಾರ ಮೆರೆಯುವ ಹೋಟೆಲಿನ ಮಾಲೀಕರಾದ ವೆಂಕಟೇಶ ಶೆಟ್ಟರು ಕ್ಯಾಷ್ ಕೌಂಟರಿನಲ್ಲಿ ಕುಳಿತು ತಮ್ಮ ಕುಶಲ ಕಣ್ಣುಗಳಿಂದ ನೋಡುತ್ತಿದ್ದರೂ ತಕರಾರು ಎತ್ತುತ್ತಿರಲಿಲ್ಲ. ಹೆಚ್ಚೆಂದರೆ ಅವರ ಮೆಚ್ಚಿನ ಸರ್ವರ್ ಲೋಕಿಯನ್ನು 'ಎಷ್ಟು ಹೊತ್ತು ಮಾಡ್ತಿದ್ದಿ? ಅವರಿಗೆ ಏನು ಬೇಕಿದೆ ತಂದುಕೊಡು. ಅವರಿಗೇನು ಕೆಲಸ ಇಲ್ಲಾಂತ ಮಾಡಿದ್ದೀಯೇನು?' ಎಂದು ಗದರಿ, ಟೈಮ್ ಪಾಸು ಮಾಡುತ್ತ ಕುಳಿತವರಿಗೂ ಬಿಸಿಮುಟ್ಟಿಸುತ್ತಿದ್ದರು.

ಆತ್ಮಾರಾಮ ಇಂದು ವೆಂಕಟೇಶ ಶೆಟ್ಟರ ಮುಂದೆ ಗರುಡಗಂಬದಂತೆ ನಿಂತರೂ ಅವರು ತನ್ನನ್ನು ಕಂಡಹಾಗೆ ಅನ್ನಿಸದೇ ಸುಮ್ಮನಿದ್ದಾಗ, ಬಲವಂತವಾಗಿ ನಕ್ಕು ಅವರ ಗಮನಸೆಳೆಯಲು ಯತ್ನಿಸಿ ಅದರಲ್ಲಿಯೂ ಸೋತು, ಈ ಶೆಟ್ಟರ ಕಣ್ಣಿಗೂ ತಾನು ಬೀಳಲಿಲ್ಲ, ಕಣ್ಣಿಗೆ ಬಿದ್ದಿದ್ದರೆ ಶೆಟ್ಟರು ಕಿವಿಯಿಂದ ಕಿವಿಯವರೆಗೆ ಮುಖ ಅಗಲಿಸದೇ ಇರುತ್ತಿರಲಿಲ್ಲ, ನಿಜಕ್ಕೂ ತನಗೇನೋ ಆಗಿದೆ ಎಂಬ ಹೆದರಿಕೆಯೂ, ಮನೆಯಲ್ಲಿ ತಾನು ಅನುಭವಿಸಿದ್ದು ಭ್ರಮೆಯಲ್ಲ, ತನ್ನ ಬುದ್ಧಿ ಸ್ಥಿಮಿತದಲ್ಲಿ ಇದೆ ಎಂಬ ಸಮಾಧಾನವೂ ಒಟ್ಟಿಗೇ ಸಂಭವಿಸಿ ಗಲಿಬಿಲಿ ಉಂಟುಮಾಡಿದವು. ಶೆಟ್ಟರ ಕಣ್ಣಿಗೆ ತಾನು ಕಾಣುವುದಿಲ್ಲವೆಂದು ಖಾತ್ರಿ ಮಾಡಿಕೊಳ್ಳಲು ವಿವಿಧ ಮುಖಚೇಷ್ಟೆಗಳನ್ನು ಮಾಡಿದ. ಯಾವುದೂ ಪರಿಣಾಮ ಬೀರಲಿಲ್ಲ. ಖಾಲಿ ಇದ್ದ ಟೇಬಲ್ಲಿನ